## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ

### ಸಿ ಸಿ ನಂ :4989/2025

**ಪಿ ಡಬ್ಲ್ಯೂ - 1**

**ಸಿ ಡಬ್ಲ್ಯೂ - 1**

**ದಿಃ 21.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ರೂಪಾ. ಸಿ.**

**ಗಂಡನ ಹೆಸರು ಃ ಲೇಟ್ ಸಂಜೀವ್**

**ವಯಸ್ಸು ಃ 38 ವರ್ಷ**

**ಉದ್ಯೋಗ ಃ ಗಾರ್ಮೆಂಟ್ಸ್ ಕೆಲಸ**

**ವಿಳಾಸ ಃ ಶ್ರೀ ನಗರ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿ ಗೊತ್ತು. ಚಾಸಾ-2 ನನ್ನ ಮಗಳು. ಚಾಸಾ-3 ನನ್ನ ಅಣ್ಣ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 30.06.2025 ರ ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 04.07.2025 ರ ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ04.07.2025 ರ ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಎರಡು ಫೋಟೋವನ್ನು ನಿಪಿ-7 ಎಂದು ಗುರುತಿಸಲಾಯಿತು.

ಒಮ್ಮೆ ಚಾಸಾ-2 ಮತ್ತು ನನ್ನ ನಡುವೆ ಮಾತಿನ ಚಕಮಕಿಯಾಗಿದ್ದಾಗ ಆಕೆ ಮನೆ ಬಿಟ್ಟು ಹೋಗಿದ್ದಳು ಆಗ ನಾನು ಪೋಲೀಸರಿಗೆ ಹೋಗಿ ವಿಚಾರವನ್ನು ತಿಳಿಸಿದಾಗ ಪೊಲೀಸರು ನಿಪಿ-

1 ಮತ್ತು 2, 4 ಮತ್ತು 6 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ-1 ಮತ್ತು 2, 4 ಮತ್ತು 6 ರಲ್ಲಿನ ವಿಚಾರ ಗೊತ್ತಿಲ್ಲ. ನನ್ನ ಮಗಳನ್ನು ಆರೋಪಿ ಅಪಹರಿಸಿರಲಿಲ್ಲ. ಈ ವಿಚಾರವಾಗಿ ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ</u> ಸ ಸ ಅ ರವರಿಂದಃ**

ದಿಃ 29.06.2025 ರಂದು ಚಾಸಾ-2 ರವರು ಮನೆಗೆ ರೇಷನ್ ತರುವುದಾಗಿ ನಮ್ಮ ಮನೆಯ ಪಕ್ಕದಲ್ಲಿನ ಅಂಗಡಿಗೆ ಹೋಗಿದ್ದಳು, ಆ ನಂತರ ಮನೆಗೆ ಬಂದಿರಲಿಲ್ಲ ಎಂದರೆ ಸರಿ. ಈ ವಿಚಾರವಾಗಿ ನಾನು ನಿಪಿ-1 ರಂತೆ ದೂರು ದಾಖಲಿಸಿದ್ದೆ ಎಂದರೆ ಸಾಕ್ಷಿಯು ದೂರು ದಾಖಲಿಸಿದ್ದು ನಿಜ ಆದರೆ ನಿಪಿ-1 ರಲ್ಲಿ ಬರೆದ ವಿಚಾರಗಳ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಚಾಸಾ-2 ರವರನ್ನು ಅಪಹರಣ ಮಾಡಿದ್ದರಿಂದಲೇ ನಾನು ನಿಪಿ-1 ರಂತೆ ದೂರು ದಾಖಲಿಸಿದ್ದೆ ಎಂದರೆ ಸರಿಯಲ್ಲ. ನಂತರ ದಿಃ 30.06.2025 ರಂದು ಪೋಲೀಸರು ನಮ್ಮ ಮನೆಗೆ ಬಂದು ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ 2-30 ರಿಂದ 3-15 ಗಂಟೆ ಸಮಯದಲ್ಲಿ ಮಾಡಿ ನಿಪಿ-2 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-3 ಫೋಟೋ ತೆಗೆಯಲಾಗಿತ್ತು ಎಂದರೆ ಸರಿಯಲ್ಲ. ನಂತರ ದಿಃ 04.07.2025 ರಂದು ನಮ್ಮ ಮನೆಯ ಮುಂಭಾಗದ ಜಾಗದ ಸ್ಥಳ ಪಂಚನಾಮೆಯನ್ನು ಸಂಜೆ 4-00 ರಿಂದ 4-30 ಗಂಟೆ ಸಮಯದವರೆಗೂ ಪಂಚರ ಸಮಕ್ಷಮ ನಿಪಿ-4 ರಂತೆ ಮಾಡಿ ನನ್ನ ಸಹಿಯನ್ನು ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ನಿಪಿ-5 ಫೋಟೋ ತೆಗೆಯಲಾಗಿತ್ತು ಎಂದರೆ ಸರಿಯಲ್ಲ. ನಂತರ ದಿಃ 04.07.2025 ರಂದು ಆರೋಪಿ ಚಾಸಾ-2 ರವರನ್ನು ಇರಿಸಿದ್ದ ಮನೆಯ ಸ್ಥಳ ಪಂಚನಾಮೆಯನ್ನು ಸಂಜೆ 5-00 ರಿಂದ 5-30 ಗಂಟೆ ಸಮಯದವರೆಗೂ ಪಂಚರ ಸಮಕ್ಷಮ ನಿಪಿ-6 ರಂತೆ ಮಾಡಿ ನನ್ನ ಸಹಿಯನ್ನು ಪಡೆಯಲಾಗಿತ್ತು ಎಂದರೆ ಸರಿಯಲ್ಲ. ಅದೇ ಸಂದರ್ಭದಲ್ಲಿ ನಿಪಿ-7 ಫೋಟೋವನ್ನು ತೆಗೆಯಲಾಗಿತ್ತು ಎಂದರೆ ಸರಿಯಲ್ಲ. ನಂತರ ದಿಃ 04.07.2025 ರಂದು ನಾನು ದಿಃ 03.07.2025 ರಂದು ಮಹಿಳಾ ಪೋಲೀಸ್ ಠಾಣೆಯವರು ತನ್ನನ್ನು ಠಾಣೆಗೆ ಬರ ಹೇಳಿ ಠಾಣೆಯಲ್ಲಿ ಚಾಸಾ-2 ರವರನ್ನು ತೋರಿಸಿ ಆಗ ಚಾಸಾ-2 ರವರನ್ನು ಪಿ.ಎಸ್.ಐ ಮೇಡಂ ರವರು ಪ್ರತ್ಯೇಕ ಕೊಠಡಿಯಲ್ಲಿ ನನ್ನ ಮುಂದೆ ವಿಚಾರಣೆ ಮಾಡಿದಾಗ ಆಕೆ

ಆರೋಪಿಯನ್ನು ತಾನು ಪ್ರೀತಿಸುತ್ತಿದ್ದ ಬಗ್ಗೆ ಹಾಗೂ ತಾನು ಮನೆ ಬಿಟ್ಟು ಹೋದ ವಿಚಾರಗಳಿಗೆ ಸಂಬಂಧಿಸಿದಂತೆ ನನ್ನ ಹೇಳಿಕೆಯನ್ನು ಈಗ ಓದಿ ಹೇಳಿದಂತೆ ಪೋಲೀಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ನಿಪಿ-1, 2, 4, 6 ಮತ್ತು 8 ರಲ್ಲಿನ ವಿಚಾರಗಳು ಗೊತ್ತಿದ್ದರು ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸಾಕ್ಷಿಯು ನಾವು ಈಗ ರಾಜಿಯಾಗಿದ್ದೇವೆಂದು ನುಡಿಯುತ್ತಾರೆ. ರಾಜಿಯಾದ ಕಾರಣ ಆರೋಪಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆಂದರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**